## ಆಗಸ್ಟ್ -20, 2021 'ರಾಷ್ಟ್ರೀಯ ವೈಜ್ಞಾನಿಕ ಮನೋಭಾವ ದಿನಾಚರಣೆ'ಯನ್ನು ಯಶಸ್ವಿಗೊಳಿಸಿ.

## ಕೋವಿಡ್ ವಿರುದ್ಧ ಹೋರಾಡಲು ನಮಗೆ ವೈಜ್ಞಾನಿಕ ಮನೋಭಾವ ಬೇಕು.

## ಜ್ಯೋತಿಷ್ಯ ಶಾಸ್ತ್ರವನ್ನು ಶಿಕ್ಷಣ ಕ್ಷೇತ್ರದಲ್ಲಿ ಉತ್ತೇಜಿಸುವ ಸರಕಾರದ ಕ್ರಮಗಳನ್ನು ವಿರೋಧಿಸೋಣ.

ಅಖಿಲ ಭಾರತ ಜನ ವಿಜ್ಞಾನ ಜಾಲ(ಎ.ಐ.ಪಿ.ಎಸ್.ಎನ್.) ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿ(ಬಿ.ಜಿ.ವಿ.ಎಸ್.)ಗಳು, 'ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ'ವು ಸರಕಾರದ ಪೋಷಣೆಯೊಂದಿಗೆ ಈ ವರ್ಷದಿಂದ 'ಎಂ ಎ.- ಜೋತಿಷ್ಯ ಶಾಸ್ತ್ರ' ಕೋರ್ಸನ್ನು ಆರಂಭಿಸಲು ಮುಂದಾಗಿರುವ ಆತಂಕಕಾರಿ ವಿದ್ಯಮಾನವನ್ನು ಗಮನಿಸಿವೆ. ಮಾತ್ರವಲ್ಲದೆ ಕೆಲವು ಸರ್ಕಾರದ ಅನುದಾನಿತ ಸಂಸ್ಥೆಗಳಲ್ಲೂ ಈ ಕೋರ್ಸ್ ಜಾರಿಯಲ್ಲಿರುವುದನ್ನೂ ಗಮನಿಸಿವೆ.

'ರಾಷ್ಟ್ರೀಯ ಶಿಕ್ಷಣ ನೀತಿ-2020' ರಲ್ಲಿ ಶಿಫಾರಸ್ಸು ಮಾಡಲಾಗಿರುವ ಭಾರತದ 'ಜ್ಞಾನ ವ್ಯವಸ್ಥೆ' ಎಂಬ ಅಂಶವನ್ನು ಪಠ್ಯಕ್ರಮದ ಎಲ್ಲಾ ಹಂತಗಳಲ್ಲಿ, ಜೋತಿಷ್ಯ ಶಾಸ್ತ್ರ ಕೋರ್ಸ್ ಆರಂಭಿಸುವ ಮೂಲಕ ಜಾರಿಗೊಳಿಸಲಾಗುತ್ತಿದೆ ಎಂದು ಆ ಸಂಸ್ಥೆಗಳು ತಮ್ಮ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಿವೆ. ಭಾರತವು ಖಗೋಳ ವಿಜ್ಞಾನ, ಗಣಿತ, ಲೋಹ ವಿಜ್ಞಾನ, ತತ್ವಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ಪ್ರಾಚೀನ ಕಾಲದಿಂದಲೂ ಶ್ರೀಮಂತವಾಗಿದೆ. ಆಧುನಿಕ ವಿಜ್ಞಾನವೆಂಬ ಮರಕ್ಕೆ ಭಿನ್ನ ಭಿನ್ನ ವಿಧಾನಗಳಲ್ಲಿ ಎಲ್ಲ ಪ್ರಾಚೀನ ಮಹಾನ್ ನಾಗರೀಕತೆಗಳೂ ನೀರೆರೆದು ಪೋಷಿಸಿವೆ. ಈ ಸಾಮೂಹಿಕ ಜ್ಞಾನಕ್ಕೆ ಅತ್ಯಂತ ಮಹತ್ವದ ಕೊಡುಗೆಗಳನ್ನು ಭಾರತ ನೀಡಿದೆಯೆಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ.

ಆದರೆ ಪ್ರಾಚೀನ ಪುರಾಣ (myth) ಗಳ ಆಧಾರದಲ್ಲಿ, ಭಾರತದಲ್ಲಿ ಪ್ರಾಚೀನ ಕಾಲದಲ್ಲಿಯೇ, ವೈಮಾನಿಕ ಹಾರಾಟದಂತಹ ವೈಜ್ಞಾನಿಕ - ತಾಂತ್ರಿಕ ಸಂಶೋಧನೆ ನಡೆದಿತ್ತು ಎನ್ನುವ ಹಸಿಸುಳ್ಳುಗಳನ್ನು ಹರಡುವುದು ಮತ್ತು ಜೋತಿಷ್ಯ ಶಾಸ್ತ್ರದಂತಹ ಆಧಾರ ರಹಿತ ಕ್ಷೇತ್ರಗಳಿಗೆ ಶೈಕ್ಷಣಿಕ ಮಹತ್ವ ನೀಡುವುದು ಭಾರತದ ನಿಜವಾದ ವೈಜ್ಞಾನಿಕ ಇತಿಹಾಸಕ್ಕೆ ಮಾಡುವ ಅವಮಾನ.

ಈ ರೀತಿಯ ತಪ್ಪು ಮತ್ತು ಕಣ್ಣು ಕುಕ್ಕುವ ಸುಳ್ಳು ಪ್ರಚಾರಗಳಿಗೆ ನಮ್ಮ ವಿದ್ಯಾರ್ಥಿಗಳು ವ್ಯಯಿಸುವ ಒಂದೊಂದು ನಿಮಿಷವನ್ನು ಭಾರತದ ನೈಜ ವೈಜ್ಞಾನಿಕ ಇತಿಹಾಸ ತಿಳಿಯಲು ಬಳಸಬೇಕಾಗಿದೆ. ವ್ಯಂಗ್ಯದ ವಿಷಯವೆಂದರೆ, ಜೋತಿಷ್ಯ ಶಾಸ್ತ್ರ ಮೂಲತಃ ಭಾರತದ ಉತ್ಪನ್ನವೇ ಅಲ್ಲ.

ಕ್ರಿಸ್ತ ಪೂರ್ವ ನಾಲ್ಕನೇ ಶತಮಾನದವರೆಗೆ ಅಂದರೆ, ಚಾಲ್ಡಿಯನ್ನರು ಮತ್ತು ಗ್ರೀಕರು ಭಾರತವನ್ನು ಪ್ರವೇಶಿಸುವವರೆಗೆ, ರಾಶಿಚಕ್ರ ಆಧಾರಿತವಾಗಿ ಜನ್ಮ ಕುಂಡಲಿ ಅಥವಾ ಜಾತಕ ರಚಿಸುವುದು ಮತ್ತು ಭವಿಷ್ಯ ಹೇಳುವುದು ಭಾರತದಲ್ಲಿ ಚಾಲ್ತಿಯಲ್ಲಿರಲಿಲ್ಲ. ವ್ಯವಸ್ಥಿತವಾದ ವೈಜ್ಞಾನಿಕ ಪರೀಕ್ಷೆಗಳಲ್ಲಿ ಭವಿಷ್ಯವಾಣಿಗಳು ಯಾವಾಗಲೂ ವಿಫಲವಾಗಿವೆ ಎಂಬುದು ಖಚಿತವಾಗಿದೆ. ಯಾವುದೇ ಗ್ರಹಗಳು ಮನುಷ್ಯರ ದೇಹದ ಮೇಲೆ ಪರಿಣಾಮ ಬೀರುತ್ತವೆ ಎನ್ನುವುದು ವೈಜ್ಞಾನಿಕವಾಗಿ ಸಾಬೀತಾಗಿಲ್ಲ. ಕೊನೆಗೆ ಹುಟ್ಟಿನ ಗಳಿಗೆಯನ್ನು ಆಧರಿಸಿ ಗ್ರಹಗಳ ಪರಿಣಾಮವು ವ್ಯಕ್ತಿಯಿಂದ ವ್ಯಕ್ತಿಯಿಂದ ಬದಲಾಗುತ್ತದೆ ಎಂಬ ಜೋತಿಷ್ಯದ ತತ್ವವು ಸಾಮಾನ್ಯ ತರ್ಕವನ್ನು ಸಹ ಉಲ್ಲಂಘಿಸುತ್ತದೆ.

ಸರಕಾರದ ಸಹಯೋಗದಲ್ಲಿ 'ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ'ವು ಇಂತಹ ಆಧಾರರಹಿತ, ಅತಾರ್ಕಿಕ ಕೋರ್ಸ್ ಆರಂಭಿಸುವುದು ಸರಕಾರವೇ ಮೂಢನಂಬಿಕೆಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಜೊತೆಗೆ ಇದು ಸಂವಿಧಾನದ ಪರಿಚ್ಛೇದ 51 ಎ(ಎಚ್) ರಲ್ಲಿ ಸೂಚಿಸುವ, ಮೂಲಭೂತ ಕರ್ತವ್ಯವಾಗಿರುವ ಭಾರತದ ಪ್ರತಿಯೊಬ್ಬ ಪ್ರಜೆಯೂ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು ಎನ್ನುವ ಆಶಯಕ್ಕೆ ವಿರುದ್ಧವಾಗುತ್ತದೆ. ದೇಶದ ಪ್ರತಿಯೊಬ್ಬ ಪ್ರಜೆಯ ಸಂವಿಧಾನ ಬದ್ಧ ಕರ್ತವ್ಯವಾದ ವೈಜ್ಞಾನಿಕ ಮನೋಭಾವವನ್ನು ಬೆಂಬಲಿಸುವ ಧೋರಣೆ ಎಂದರೆ ಅದು ಹುಸಿ ವಿಜ್ಞಾನಕ್ಕೆ ಕುಮ್ಮಕ್ಕು ಕೊಡುವುದನ್ನು- ಅದರಲ್ಲೂ ಸರಕಾರವೇ ಕುಮ್ಮಕ್ಕು ಕೊಡುವುದನ್ನು ವಿರೋಧಿಸುವುದು ಸಹ ಸೇರಿದೆ. ಸರಕಾರದ ಇಂತಹ ಪ್ರಯತ್ನಗಳನ್ನು ನಾವು ವಿರೋಧಿಸುತ್ತೇವೆ.

ಕೇಂದ್ರ ಮತ್ತು ಕೆಲವು ರಾಜ್ಯ ಸರ್ಕಾರಗಳು ಉತ್ತೇಜಿಸಿ, ಪ್ರೋತ್ಸಾಹಿಸುತ್ತಿರುವ ನಕಲಿ ಅಂಕಿ ಅಂಶಗಳು , ಹುಸಿ ವಿಜ್ಞಾನ, ಮತ್ತು ಬೇಜವಾಬ್ದಾರಿ ತೀರ್ಮಾನಗಳು, ಒಂದು ಕಡೆಯಿಂದ ಕೋವಿಡ್ ಸೋಂಕಿನ ತೀವ್ರ ಹರಡುವಿಕೆ ಕಾರಣವಾಗುತ್ತಿದೆ, ಇನ್ನೊಂದು ಕಡೆಯಿಂದ ಅದರ ನಿಯಂತ್ರಣಕ್ಕೆ ಯೋಜಿತ, ವೈಜ್ಞಾನಿಕ ನಿಯಮಗಳನ್ನು ರೂಪಿಸುವುದಕ್ಕೂ ಅಡ್ಡಿಯಾಗುತ್ತಿದೆ. ಒಂದು ವೈಜ್ಞಾನಿಕ ಮನೋಧೋರಣೆ ಇಲ್ಲದೆ ಕೋವಿಡ್ ವಿರುದ್ಧದ ಯಶಸ್ವಿ ಹೋರಾಟ ಸಾಧ್ಯವಿಲ್ಲ. ಭಾರತದ ಬಹಳಷ್ಟು ರಾಜ್ಯಗಳಲ್ಲಿ ಲಾಭಕೋರ ಖಾಸಗಿ ಆರೋಗ್ಯ ವ್ಯವಸ್ಥೆಯನ್ನು ಬೆಂಬಲಿಸುವಂತಹ ನೀತಿಗಳು ಜಾರಿಯಲ್ಲಿವೆ. ಇದರಿಂದಾಗಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ನಿರ್ಲಕ್ಷ್ಯಕ್ಕೆ ತುತ್ತಾಗಿದೆ. ಕೋವಿಡ್ ಸೋಂಕನ್ನು ಪರಿಣಾಮಕಾರಿಯಾಗಿ ಎದುರಿಸಬೇಕಾದಲ್ಲಿ ಈ ನೀತಿಯನ್ನು ಸಂಪೂರ್ಣವಾಗಿ ಬದಲಾಯಿಸಬೇಕಿದೆ.

ಕೋವಿಡ್ ನಿಯಂತ್ರಣಕ್ಕೆ ಉಚಿತ ಮತ್ತು ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದತಂಹ ರಾಷ್ಟ್ರೀಯ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವ ಬದ್ಧತೆ ಬೇಕು. ಇದಕ್ಕೆ ಪ್ರಾಮಾಣಿಕ ಅಂಕಿ ಅಂಶಗಳ ಸಂಗ್ರಹ ಕಾರ್ಯ ನಡೆಯಬೇಕು. ಕೇಂದ್ರ ಸರಕಾರವು ಉಚಿತ ಲಸಿಕೆಯ ಜಾಹೀರಾತಿಗೆ ಕೋಟ್ಯಾಂತರ ರೂಪಾಯಿಗಳ ಖರ್ಚು ಮಾಡುತ್ತಿರುವ ಸಂದರ್ಭದಲ್ಲಿ, ತಳ ಹಂತದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಲಸಿಕೆ ಲಭ್ಯವಿಲ್ಲದಿರುವುದು, ಆಕ್ಸಿಜನ್ ಕೊರತೆ, ಹಾಸಿಗೆ ಕೊರತೆ ಕಾಡುತ್ತಿದೆ. ಕೊನೆಗೆ ಕೋವಿಡ್ ಸಂಬಂಧಿ ಮೃತ ದೇಹಗಳ ವಿಲೇವಾರಿಯಲ್ಲೂ ಸರಕಾರಗಳು ವಿಫಲ ಆಗಿವೆ.

ಮಾಧ್ಯಮಗಳು ಕೆಳಹಂತದ ವಾಸ್ತವ ಅಂಕಿ ಅಂಶಗಳನ್ನು ಪ್ರಸಾರ ಮಾಡದಂತೆ ಸರಕಾರಗಳು ತಮ್ಮ ಪ್ರಭಾವವನ್ನು ದುರುಪಯೋಗಪಡಿಸಿಕೊಂಡು,ಕೇವಲ ನಕಲಿ ದಾಖಲೆಗಳನ್ನು ಉತ್ತೇಜಿಸಿ ವಾಸ್ತವಾಂಶಗಳನ್ನು ಮರೆಮಾಚುತ್ತಿವೆ.

ಅಖಿಲ ಭಾರತ ಜನ ವಿಜ್ಞಾನ ಜಾಲ(ಎ.ಐ.ಪಿ.ಎಸ್.ಎನ್.) ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿ(ಬಿ.ಜಿ.ವಿ.ಎಸ್.) ಸದಸ್ಯರು ಮತ್ತು ನಾಗರಿಕರು ಜೋತಿಷ್ಯ ಶಾಸ್ತ್ರ, ಭವಿಷ್ಯಗಳಂತಹ ಅವೈಜ್ಞಾನಿಕ ಕೋರ್ಸ್‌ಗಳನ್ನು ಸರಕಾರಿ ಅನುದಾನಿತ ಸಂಸ್ಥೆಗಳಲ್ಲಿ ತಕ್ಷಣವೇ ನಿಲ್ಲಿಸಬೇಕೆಂದು ಒತ್ತಾಯಿಸುತ್ತೇವೆ. ಅದರ ಬದಲಿಗೆ, ಭಾರತದ ವಿ.ವಿ.ಗಳಲ್ಲಿ ಖಗೋಳ ವಿಜ್ಞಾನವನ್ನು ಪರಿಚಯಿಸಿ ಉತ್ತೇಜಿಸುವಂತೆ ಒತ್ತಾಯಿಸುತ್ತೇವೆ. ಆರೋಗ್ಯದ ಖಾಸಗೀಕರಣವನ್ನು ನಿಲ್ಲಿಸಿ, ಆರೋಗ್ಯ ಸೇವೆಯನ್ನು ಸಾರ್ವತ್ರಿಕ ಹಕ್ಕು ಎಂದು ಘೋಷಿಸಿ, ಅತ್ಯುತ್ತಮ ನೀತಿಗಳೊಂದಿಗೆ ಆರೋಗ್ಯ ಸೇವೆಯನ್ನು ರೂಪಿಸಬೇಕು. ವಾಸ್ತವಾಂಶಗಳನ್ನು ಪ್ರಸಾರ ಮಾಡುವ ಮಾಧ್ಯಮಗಳ ಮೇಲಿನ ಎಲ್ಲಾ ವಿಧದ ಧಾಳಿಗಳನ್ನು ಪ್ರಾಮಾಣಿಕವಾಗಿ ನಿಲ್ಲಿಸಬೇಕೆಂದು ನಾವು ಒತ್ತಾಯಿಸುತ್ತೇವೆ.

ಸಮಾಜದಲ್ಲಿ ವೈಜ್ಞಾನಿಕ ಮನೋಭಾವ ಉತ್ತೇಜಿಸಬೇಕೆನ್ನುವ ಸಂವಿಧಾನದ 51 ಎ(ಎಚ್) ವಿಧಿಯ ಆಶಯವನ್ನು ಗೌರವಿಸುವ ಮೂಲಕ ಕೋವಿಡ್ ಸಾಂಕ್ರಾಮಿಕವನ್ನು ಸಮರ್ಥವಾಗಿ ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕೆಂದು ಅಖಿಲ ಭಾರತ ಜನ ವಿಜ್ಞಾನ ಜಾಲ(ಎ.ಐ.ಪಿ.ಎಸ್.ಎನ್.) ಮತ್ತು ಭಾರತ ಜ್ಞಾನ ವಿಜ್ಞಾನ ಸಮಿತಿ(ಬಿ.ಜಿ.ವಿ.ಎಸ್.) ಒತ್ತಾಯಿಸುತ್ತವೆ. ಈ ನಿಟ್ಟಿನಲ್ಲಿ, ಎಲ್ಲಾ ನಾಗರಿಕರು, ಸಂಘಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಆಗಸ್ಟ್ 20 ರಂದು ವೈಜ್ಞಾನಿಕ ಮನೋಭಾವನಾ ದಿನಾಚರಣೆಯನ್ನು ಆಚರಿಸುವ ಮೂಲಕ ಜನಸಾಮಾನ್ಯರ ಮಧ್ಯೆ ವೈಜ್ಞಾನಿಕ ಚಿಂತನೆಯನ್ನು ಹರಡಿ , ಕೋವಿಡ್ ಸಾಂಕ್ರಾಮಿಕವನ್ನು ವೈಜ್ಞಾನಿಕವಾಗಿ ಹಿಮ್ಮೆಟ್ಟಿಸಬೇಕೆಂದು ಮನವಿ ಮಾಡುತ್ತೇವೆ. ಹಾಗೂ ಡಾ. ನರೇಂದ್ರ ದಾಬೋಲ್ಕರ್, ಗೋವಿಂದ ಪನ್ಸಾರೆ, ಡಾ.ಎಂ.ಎಂ. ಕಲ್ಬುರ್ಗಿ ಹಾಗೂ ಗೌರಿ ಲಂಕೇಶ ಮುಂತಾದವರ ಕ್ರೂರ ಕಗ್ಗೊಲೆಗಳ ವಿರುದ್ಧ ದನಿ ಎತ್ತಬೇಕೆಂದು ವಿನಂತಿಸುತ್ತೇವೆ.

[ ನಾಗರಿಕತೆ ಎಂದರೆ ಭಿನ್ನ ಅಭಿಪ್ರಾಯಗಳ ಪೋಷಣೆ.....ಮಹಾತ್ಮ ಗಾಂಧಿ.]